ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—9,437 ಎಕರೆ 33 ಗುಂಟೆಗಳಲ್ಲಿ ತರೀ ಎಷ್ಟು, ಖುಷ್ಕಿ ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ವಿವರ ಹೇಳುವುದ ಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಖಾನಗಿ ಜಮೀನು ಸಾಗುವಳಿ ಮಾಡಿನಲು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಫ್ಯಾಲೋಲ್ಯಾಂಡ್ ಕಲ್ಟಿವೇಷನ್ ಆಕ್ಟ್ ಎಂದು ಇದೆ. ಅದನ್ನು ಜಾರಿಗೆ ಕೊಡಬಹುದು, ಅದರಿಂದ ಪ್ರಯೋಜನವಾಗುತ್ತಿದೆ ಎಂದು ಹೇಳಿ ನಾನು ನಂಬಿದ್ದೇನೆ. ನೋಡಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಸಾಗುವಳಿ ಮಾಡದೆ, ಜಮೀನನ್ನು ರೈತರಿಗೂ ಕೊಡುವುದಿಲ್ಲ, ಬೇರೆಯವರಿಗೂ ಮಾರಾಟ ಮಾಡುವುದಿಲ್ಲ. ಇದರಿಂದ ದೇಶಕ್ಕೆ ಆಹಾರದ ವಿಷಯದಲ್ಲಿ ನಷ್ಟ ಸಂಭವಿಸುತ್ತಿದೆ ಅಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಕ್ಷನ್ನು ಅನ್ವಯಿಸೋಣ.

Completion of the anecut work at Sindhwalli, Mysore Taluk.

Q.—426. **Sri D. DEVARAJ URS** (Hunsur).—

Will the Government be pleased to state :—

(*a*) when the anecut work at Sindhwalli, Mysore Taluk, was commenced :

(*b*) whether the work is completed

(*c*) if not, why ;

(*d*) when the work was stopped ?

A.—**Sri Kadidal MANJAPPA** (Minister for Revenue and Public Works).—

(*a*) During 1950.

(*b*) Yes.

(*c*) and (*d*) Does not arise.

ಶ್ರೀ ಡಿ. ದೇವರಾಜ ಅರಸ್.—ಇದರ estimate ಎಷ್ಟಾಗುತ್ತದೆ, ಸ್ವಾಮಿ ?

Mr. SPEAKER.—The work is completed. It is in the answer. You must thank the Government.

Sri D. DEVARAJ URS.—My information is that the work is incomplete. That is why I am asking whether the work according to the estimate is completed ?

Sri Kadidal MANJAPPA.—The estimated cost is Rs. 23,000.

Sri D. DEVARAJ URS.—Has the work been completed in accordance with the estimate ?

Sri Kadidaal MANJAPPA.—Yes. That is the information I have received.

Construction of small channels in Chikmagalur District.

Q.—475. **Srimathi B. L. SUBBAMMA** (Chickmagalur-Mudigere).—

Will the Governmeut be pleased to state :—

(*a*) the number of applications received since the last five years requesting for the construction of small channels in Chickmagalur District :

(*b*) the number of channels whose works are under execution ;

(*c*) if not, the reason for the same?

A.—**Sri Kadidal MANJAPPA** (Minister for Revenue and Public Works).—

(*a*) This Information is not available readily.

(*b*) 30 as per programme of works.

(*c*) Does not arise in view of reply to (*b*).

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—(ಎ) ಪ್ರಶ್ನೆಗೆ ಉತ್ತರವಾಗಿ ವಿವರಗಳು ದೊರೆಯುವಂತಿಲ್ಲವೆಂದು ತಿಳಿಸಿದ್ದೀರಿ. ತಾವು ಪಿ. ಡಬ್ಲ್ಯು. ಡಿ. ಯವರಿಂದ ವಿವರಗಳನ್ನು ತರಿಸಿಕೊಂಡಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಸ್ವಲ್ಪ ಕಾಲ ಹಿಡಿಯುತ್ತದೆ, ಆದ್ದರಿಂದ ತಡವಾಗಿದೆ.

ಒಬ್ಬ ಸದಸ್ಯರು.—ಕಾಲು ಹಿಡಿಯುಬೇಕಾಗಿರುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕಾಲನ್ನಲ್ಲ, ಕಾಲ ಹಿಡಿಯುತ್ತದೆಂದು ತಿಳಿಸಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ:—30 ನಾಲೆಗಳ ಕೆಲಸ ನಡೆಯುತ್ತಿದೆಯೆಂದು ತಾವು ತಿಳಿಸಿದ್ದೀರಿ. ಇವುಗಳೆಲ್ಲಾ ಕೇವಲ ಪಟ್ಟಿಯಲ್ಲಿ ಮಾತ್ರ ನೂಚಿಸಿರ ತಕ್ಕವುಗಳೋ ಅಥವಾ ಹಾಗೆ ಕೆಲಸವೇನಾದರೂ ನಡೆಯುತ್ತಿದೆಯೋ?

ಶ್ರೀ ಕಡಿದಾಳ್ ಮಂಜಪ್ಪ—ಇಲ್ಲಿ ತಿಳಿಸಿರತಕ್ಕವು ಗಳೆಲ್ಲಾ ಹಾಲಿ ಕೆಲಸ ನಡೆಯುತ್ತಿರುವವುಗಳು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಅವುಗಳುಎಲ್ಲೆಲ್ಲ ನಡೆಯುತ್ತಿರುತ್ತವೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳನ್ನೆಲ್ಲ ಕೊಡಬಲ್ಲೆ. ನನ್ನಲ್ಲಿರುತ್ತವೆ. ಆದರೆ ಸದ್ಯಕ್ಕೆ ಸಾಧ್ಯವಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ —ಅಲ್ಲಿ ಇಂಥ ಚಿಕ್ಕ ಚಿಕ್ಕ ಕಾಲುವೆಗಳಿಗೆ ಹೆಚ್ಚಿನ ಅಗತ್ಯವಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಬಂದಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ನಲ ಅಲ್ಲ ಮಳೆಯೇ ಇಲ್ಲದೆ ಭತ್ತದ ಬೆಳೆಯೆಲ್ಲಾ ಹಾಳಾಗಿ ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಕಡೆಯಿಂದ ಇಂಥ ವರದಿಗಳು ಬಂದಿರುತ್ತವೆ.